**ಪಾಟೀ ಸವಾಲು ಃ ವಾದಿಯ ಪರ ವಕೀಲರಾದ**
**ಶ್ರೀ ಕೆ ಎಂ ಎಸ್ ರವರಿಂದ ಃ-**
**ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.**
**ಡಿ.ಡಬ್ಲ್ಯೂ 1. ದಿಃ 19-09-2018. ಓ ಎಸ್ ನಂ ಃ 127/2013**

ವಾದಿಗಳು ಬೆಂಗಳೂರಿನಲ್ಲಿ ವಾಸವಾಗಿರುತ್ತಾರೆಂದರೆ ನನಗೆ ಗೊತ್ತಿಲ್ಲ. 3ನೇ ಐಟಂ ಸ್ವತ್ತು ನನ್ನ ತಂದೆಯ ಹೆಸರಿನಲ್ಲಿದೆ. ನಿಡಿ 1 ನ್ನು ಸೃಷ್ಟಿ ಮಾಡಿ ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆಂದರೆ ಸರಿಯಲ್ಲ. ಐಟಂ ನಂ. 3 ರ ಆಸ್ತಿಯನ್ನು ಫವತಿ ವಾರಸು ಆಧಾರದ ಮೇಲೆ ಖಾತೆ ಮಾಡಿಸಿಕೊಂಡಿರುತ್ತೇನೆ. ಸದರಿ 3ನೇ ಐಟಂ ಆಸ್ತಿಯನ್ನು ನನ್ನ ತಂದೆ ಯಾರಿಂದ ಖರೀದಿಸಿದ್ದರು ಎಂದು ನನಗೆ ಗೊತ್ತಿಲ್ಲ. ಸದರಿ 3ನೇ ಐಟಂ ಆಸ್ತಿಯು ವಾದಿಗಳ ತಂದೆ ಕದಿರಪ್ಪ ರವರಿಗೆ ಸೇರಿತ್ತು ಎಂದರೆ ಇರಬಹುದು. ವಾದಿಗಳು ಬೆಂಗಳೂರಿನಲ್ಲಿ ವಾಸವಾಗಿರುವುದರಿಂದ ನನ್ನ ತಂದೆ ಯಾವಾಗ ಮರಣ ಹೊಂದಿದರು ಎನ್ನುವ ವಿಷಯ ತಿಳಿದುಕೊಳ್ಳಲಾಗಲಿಲ್ಲ ಎಂದರೆ ಸರಿಯಲ್ಲ. ದಾವೆಯನ್ನು ಹೂಡಿದ ನಂತರ ನ್ಯಾಯಾಲಯದಿಂದ ಸಮನ್ಸ್ ಹೋಗಿ ಹಿಂತಿರುಗಿದ ನಂತರ ನನ್ನ ತಂದೆ ಮರಣ ಹೊಂದರುವ ವಿಚಾರ ವಾದಿಗಳಿಗೆ ಗೊತ್ತಾಯಿತು ಎಂದರೆ ಸರಿಯಲ್ಲ. ನನ್ನ ತಂದೆ ಮರಣ ಹೊಂದಿರುವ ವಿಚಾರ ವಾದಿಗಳ ಗಮನಕ್ಕೆ ಬಂದ ತಕ್ಷಣ ಪ್ರಸ್ತುತ ಅರ್ಜಿಯನ್ನು ಸಲ್ಲಿಸಿರುತ್ತಾರೆಂದರೆ ಸರಿಯಲ್ಲ.

**ಮರುವಿಚಾರಣೆ- ಇಲ್ಲ.**
**(ತೆ ನ್ಯಾ ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)**
**ಓ ಹೇಳಿ ಕೇಳಿ ಸರಿ ಇದೆ.**

**ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆಎಂಎಫ್‌ಸಿ,, ಗುಬ್ಬಿ**